**ಸಾಕ್ಷಿಯನ್ನು ದಿಃ17.02.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ಈ ದಾವೆಯನ್ನು ಸ.ನಂ.89/1 ಹಾಗೂ 89/5 ರಲ್ಲಿ ತಿರುಗಾಡುವ ರಸ್ತೆಗೆ ಬೇಲಿ ಹಾಕುತ್ತಿದ್ದರಿಂದ ಹಾಕಿದ್ದೇವೆ. ಆ ಬಗ್ಗೆ ನೀವು ಪೊಲೀಸರಿಗೆ ದೂರು ನೀಡಿದ್ದೀರಾ ಎಂದರೆ ಇಲ್ಲ. ದೂರು ನೀಡಲು ತೊಂದರೆ ಇತ್ತಾ ಎಂದರೆ, ನ್ಯಾಯಾಲಯದ ಡಿಕ್ರಿ ಇತ್ತು ಎಂದು ನುಡಿಯುತ್ತಾರೆ.

2. ಈ ದಾವಾ ಆಸ್ತಿ ಸ.ನಂ.89/1 ಹಾಗೂ 89/5 ರಲ್ಲಿ 1 ಎಕರೆ 12 ಗುಂಟೆ ಇದೆ. ಸ.ನಂ.89/1 ರಲ್ಲಿ ಒಟ್ಟು 1 ಎಕರೆ 12 ಗುಂಟೆ ಹಾಗೂ 89/5 ರಲ್ಲಿ ಒಟ್ಟು 16 ಗುಂಟೆ ಇತ್ತು, ಅದರಲ್ಲಿ 1 ಗುಂಟೆ ರಸ್ತೆಗೆ ಇದೆ.

3. ಈ ದಾವೆ ಹಾಕುವ ಕಾಲಕ್ಕೆ ಯಾವ ದಾಖಲೆ ನೋಡಿದ್ದೀರಾ ಎಂದರೆ, ನ್ಯಾಯಾಲಯದ ಡಿಕ್ರಿ ಹಾಜರುಪಡಿಸಿದ್ದೇವೆ. ಸದರಿ ಡಿಕ್ರಿ ಯಾವ ನಂಬರ್ ಎಂದು ನನಗೆ ಗೊತ್ತಿಲ್ಲ.

4. ಅ.ದಾ.ನಂ.290/2017 ರ ದಾವೆ ಈ ಹಿಂದೆ ಇತ್ತು ಎಂದರೆ ಸರಿ. ಅದರಲ್ಲಿ ನೀವು ವಾದಿಯಾಗಿದ್ದೀರಿ ಎಂದರೆ ಸರಿ. ಸದರಿ ದಾವೆಯನ್ನು ಯಾವ ಪರಿಹಾರ ಕೋರಿ ಹಾಕಿದ್ದೀರಿ ಎಂದರೆ, ನಮ್ಮ ತಂದೆ ಜಮೀನಿನ ಮೇಲೆ ಹಾಕಿದ್ದೆವು. ಸದರಿ ದಾವೆಯನ್ನು ಯಾವ ಸರ್ವೇ ನಂಬರ್ ಮೇಲೆ ಹಾಕಿದ್ದೀರಿ ಎಂದರೆ, ಸ.ನಂ.89/1 ಹಾಗೂ 89/5 ಕ್ಕೆ ಹಾಕಿದ್ದೆವು.

5. ದಿಃ 18.06.2018 ರ ರಾಜಿ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇತ್ತಾ ಎಂದರೆ, ಕೊಟ್ಟಿದ್ದೇವೆ.

6. ನನ್ನ ತಂದೆ ಹೆಸರು ವೆಂಕಟೇಗೌಡ. ನನ್ನ ತಂದೆಗೆ ಒಟ್ಟು 4 ಜನ ಮಕ್ಕಳು. ಪುರುಷೋತ್ತಮ ನನ್ನ ತಮ್ಮ.

7. ದಿಃ 18.06.2018 ರಂದು ಈ ನ್ಯಾಯಾಲಯದಲ್ಲಿ ಹಾಕಿದ ರಾಜಿ ಅರ್ಜಿಯಲ್ಲಿ ಮೆಲ್ಲಹಳ್ಳಿ ಗ್ರಾಮದ ಸ.ನಂ.89/5 ರಲ್ಲಿ ಅವರ ಭಾಗಕ್ಕೆ 15 ಗುಂಟೆ ಜಮೀನು ಸೇರಿತ್ತು ಎಂದು ಇದೆ ಎಂದರೆ ಸರಿ, ಆದರೆ 1 ಗುಂಟೆ ರಸ್ತೆಗೆ ಇತ್ತು.

8. ಪೂರ್ವಕ್ಕೆಃ ಬಾಗ್ದಾರಾಮ್, ಪಶ್ಚಿಮಕ್ಕೆಃ 4 ನೇ ಪ್ರತಿವಾದಿ, ಉತ್ತರಕ್ಕೆಃ ಸಣ್ಣೇಗೌಡರ ಜಮೀನು, ದಕ್ಷಿಣಕ್ಕೆ 1 ನೇ ಪ್ರತಿವಾದಿಯ ಜಮೀನು, ಸದರಿ 15 ಗುಂಟೆ ಜಮೀನಿನಲ್ಲಿ ನಿಮಗೆ

ಹಕ್ಕು ಮಾಲೀಕತ್ವ ಇದೆಯಾ ಎಂದರೆ, 16 ಗುಂಟೆಯಲ್ಲಿ ತಿರುಗಾಡಲು ಬಿಟ್ಟಿರುವ ದಾರಿಯಲ್ಲಿ ಇದೆ.

9. ದಿಃ 18.06.2018 ರಂದು ಪುರುಷೋತ್ತಮ ರವರ ಹೆಸರಿಗೆ ರಾಜಿ ಆದೇಶದ ಮೇರೆಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ, ನಾವು ರಾಜಿಯಾಗಿಲ್ಲ ಎಂದು ನುಡಿಯುತ್ತಾರೆ.

10. ಸ.ನಂ.89/5 ರಲ್ಲಿ 16 ಗುಂಟೆ ಪೈಕಿ 15 ಗುಂಟೆಯಲ್ಲಿ ಅವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ, ಸರಿ.

11. ಅ.ದಾ.ನಂ.290/2017 ರಲ್ಲಿ ನಿಮ್ಮ ಭಾಗಕ್ಕೆ ಮೆಲ್ಲಹಳ್ಳಿ ಗ್ರಾಮದ ಸ.ನಂ.89/1 ರಲ್ಲಿ 13 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ ಜಮೀನು ಹೊರತುಪಡಿಸಿ ನಿಮಗೆ ಬೇರೆ ಯಾವುದರಲ್ಲೂ ಹಕ್ಕು ಮಾಲೀತ್ವ ಇಲ್ಲ ಎಂದರೆ, ಅದರಲ್ಲೂ ಸಹ 1 ಗುಂಟೆ ನಾವು ರಸ್ತೆಗೆ ತೋರಿಸಿದ್ದೇವೆ ಎಂದು ನುಡಿಯುತ್ತಾರೆ.

12. ನಿಮ್ಮ ರಾಜಿ ಅರ್ಜಿಯಲ್ಲಿ ನಿಮಗೆ ರಸ್ತೆಗೆ ಬಿಟ್ಟ ಬಗ್ಗೆ ಬರವಣಿಗೆ ಇಲ್ಲ ಎಂದರೆ ಸರಿಯಲ್ಲ.

13. ನೀವು, ನಿಮ್ಮ ತಮ್ಮ ಹಾಗೂ ತಂದೆ ರಾಜಿ ಮಾಡಿಕೊಂಡ ಪ್ರಕಾರ ನಿಮಗೆ ತಿರುಗಾಡಲು ಜಾಗ ಬಿಡದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

14. ನೀವು ರಾಜಿ ಮಾಡಿಕೊಂಡ ಪ್ರಕಾರ ನಿಮಗೆ ಬಂದ ಭಾಗವನ್ನು ಖಾತೆ ಮಾಡಿಕೊಳ್ಳಲು ತೊಂದರೆ ಇತ್ತಾ ಎಂದರೆ, ನಾವು ಸರ್ವೇ ಮಾಡಿದಾಗ 10 ಗುಂಟೆ ಪ್ರತ್ಯೇಕ ಪಹಣಿ ಬಂದಿದ್ದರಿಂದ ಮಾಡಿಸಿಕೊಳ್ಳಲು ಆಗಿಲ್ಲ. ಸದರಿ ವಿಚಾರವನ್ನು ಪ್ರಮಾಣಪತ್ರ ಅಥವಾ ವಾದ ಪತ್ರದಲ್ಲಿ ಹೇಳಿಲ್ಲ.

15. ರಾಜಿ ಅರ್ಜಿಯಲ್ಲಿ ನಿಮಗೆ ಒಪ್ಪಿಗೆ ಇದ್ದೇ ಸಹಿ ಮಾಡಿದ್ದೀರಾ ಎಂದರೆ ಸರಿ.

16. ದಾವಾ ಆಸ್ತಿಯು ಮೂಲತಃ ಶ್ರೀನಿವಾಸಗೌಡರವರಿಗೆ ಸೇರಿದ್ದು. ನಮ್ಮ ತಂದೆ ಮೃತರಾದ ದಿನಾಂಕ ನನಗೆ ಗೊತ್ತಿಲ್ಲ.

17. ನಿಮ್ಮ ತಂದೆ ಬದುಕಿರುವಾಗ ಎಲ್ಲಾ ಮಕ್ಕಳಿಗೆ ಹಾಗೂ ಅವರಿಗೆ ಸಮವಾಗಿ ಹಂಚಿದ್ದರು ಎಂದರೆ ಸರಿ.

18. ಪ್ರತಿವಾದಿ ಪುರುಷೋತ್ತಮ ರವರು ನಿಮ್ಮ ತಂದೆಯ ಅಭಿಪ್ರಾಯದಂತೆ ಹಾಗೂ ರಜಾಿ ಅರ್ಜಿ ಪ್ರಕಾರ ಖಾತೆ ಮಾಡಿಸಿಕೊಂಡಿದ್ದರೂ ಅವರ ಮೇಲಿ ಅಸೂಯೆಯಿಂದ ಈ ದಾವೆ ಹಾಕಿದ್ದೀರಾ ಎಂದರೆ ಸರಿಯಲ್ಲ.

19. ಅ.ದಾ.ನಂ.290/2017 ರಲ್ಲಿ ಡಿಕ್ರಿಯಲ್ಲಿ ನೀವು ಹೇಳುವಂತೆ ನಿಮಗೆ ರಸ್ತೆ ಬಿಟ್ಟಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

20. ರಾಜಿ ಅರ್ಜಿ ಪ್ರಕಾರ ನಿಮಗೆ ಬಂದ ಚಕ್ಕುಬಂದಿ ಯಾವುದು ಎಂದರೆ, ಪೂರ್ವಕ್ಕೆ: ಸೋಮಶೇಖರ, ಪಶ್ಚಿಮಕ್ಕೆ: ಶ್ರೀನಿವಾಸ, ಉತ್ತರಕ್ಕೆ ಸಣ್ಣೇಗೌಡ ಹಾಗೂ ದಕ್ಷಿಣಕ್ಕೆ ನಮ್ಮ ತಂದೆ ಹೆಸರಿನಲ್ಲಿ ತಿರುಗಾಡಲು ಬಿಟ್ಟಿರುವ 20 ಅಡಿ ರಸ್ತೆ.

21. ಉತ್ತರಕ್ಕೆ ಸಣ್ಣೇಗೌಡರ ಸ.ನಂ.88 ಅಥವಾ 89 ಇರಬಹುದು,

22. ಈ ದಾವಾ ಆಸ್ತಿಯ ಚಕ್ಕುಬಂದಿ ಹಾಗೂ ಸರ್ವೇ ನಂಬರ್ ಗೆ ಹಾಗೂ ರಾಜಿ ಅರ್ಜಿಯಲ್ಲಿ ಸೇರಿಸಿರುವ ಸರ್ವೇ ನಂಬರ್, ಚಕ್ಕುಬಂದಿ ಹಾಗೂ ಅಳತೆಗೆ ವ್ಯತ್ಯಾಸ ಇದೆ ಎಂದರೆ, ಸರಿಯಲ್ಲ.

23. ಪ್ರತಿವಾದಿ ಖಾತೆ ಮಾಡಿಸಿಕೊಂಡು ಸ್ವಾಧೀನದಲ್ಲಿ ಇರುವ ಜಮೀನಿಗೆ ತೊಂದರೆ ಕೊಡಲು ಈ ದಾವೆ ಹಾಕಿದ್ದೀರಾ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ